# ಚೋಕರ್‌ನ ಸೊಬಗು



ಕುತ್ತಿಗೆಗೆ ಫಿಟ್ ಆಗಿರುವ ಸುಂದರ ಆಭರಣ ಚೋಕರ್. ರೇಷ್ಮೆ ಸೀರೆ ಉಟ್ಟಾಗ ಚೋಕರ್ ಸಖತ್ ಲುಕ್ ಕೊಡುತ್ತದೆ. ಬಂಗಾರದ ಚೋಕರ್‌ನಲ್ಲಿ ಹಲವು ವೈವಿಧ್ಯದವು ಇದೀಗ ಲಭ್ಯ. ಚಿನ್ನದ ಮೇಲೆ ಕುಂದನ್, ಹರಳು, ಮುತ್ತು, ಕೆಂಪು, ಜೇಡ್, ಮುತ್ತುಗಳನ್ನು ಕೂರಿಸಿ ಮಾಡಿದ ಚೋಕರ್‌ಗಳೂ ಬಹುಬೇಡಿಕೆ ಪಡೆದಿವೆ. ಹಾಗೆಂದು ಚೋಕರ್ ಫ್ಯಾಷನ್ ಜಗತ್ತಿಗೆ ಕಾಲಿಟ್ಟದ್ದು ಇಂದು ನಿನ್ನೆಯಲ್ಲ. ಅಜ್ಜಿಯರ ಕಾಲದಿಂದಲೂ ಚೋಕರ್ ಬಳಕೆಯಲ್ಲಿದೆ.

ಹಿಂದೆ ಅಜ್ಜಿಯರು ಚೋಕರ್ ಬಳಸುತ್ತಿದ್ದುದು ಮದುವೆಯಂತಹ ಶುಭ ಸಮಾರಂಭಕ್ಕೆ ಮಾತ್ರ. ಚಿನ್ನದಿಂದಲೇ ತಯಾರಿಸಿ ಒಳಗೆ ಟೊಳ್ಳಾಗಿರುವ ಭಾಗಕ್ಕೆ ಅರಗನ್ನು ತುಂಬಿ ಮಾಡಿದ ಚೋಕರ್‌ಗಳು ಸಖತ್ ಲುಕ್ ಕೊಡುತ್ತಿದ್ದವು. ಇದು ಗೆಜ್ಜೆ ಮಾಲಾಕ್ ಅನ್ನೇ ಹೋಲುವುದಾದರೂ ಚೋಕರ್‌ಗಳು ಪುಟ್ಟ ಹುಡುಗಿಯಿಂದ ಹಿಡಿದು ವಯಸ್ಸಾದವರೆಗೆ ಎಲ್ಲರೂ ಧರಿಸುತ್ತಿದ್ದರು. ಈಗೀಗ ಮದುಮಗಳು, ಸಿನಿಮಾ ತಾರೆಯರು, ಮಾಡೆಲ್‌ಗಳು ಕೂಡ ಚೋಕರ್ ಅನ್ನೇ ಇಷ್ಟಪಟ್ಟು ಧರಿಸುತ್ತಿದ್ದಾರೆ. ಈಗ ಫ್ಯಾಷನ್ ಪ್ರಪಂಚದಲ್ಲಿ ಚೋಕರ್‌ಗಳದ್ದೇ ಕಾರುಬಾರು. ದುಬಾರಿ ಚಿನ್ನದ ಚೋಕರ್ ಅನ್ನೇ ಹೋಲುವ ಚೋಕರ್‌ಗಳು ಕೃತಕ ಆಭರಣದಲ್ಲೂ ಲಭ್ಯ. ಕುತ್ತಿಗೆಯ ಸುತ್ತ ಬಿಗಿಯಾಗಿ ಸುತ್ತಿಕೊಳ್ಳುವ ಈ ಆಭರಣದ ಹಿಂಭಾಗವನ್ನು ದಾರದಿಂದ ಸುತ್ತಿ ಬಳಸುವುದೂ ಪದ್ಧತಿ. ಚೋಕರ್‌ಗಳಲ್ಲಿ ಹಲವು ವೈವಿಧ್ಯಗಳಿವೆ. ಹೀಗಾಗಿ ರೇಷ್ಮೆ ಸೀರೆ ಉಟ್ಟರೆ ಸೀರೆಯ ಬಣ್ಣಕ್ಕೆ ಒಪ್ಪುವ ಚೋಕರ್ ಆಯ್ದುಕೊಂಡು ಮ್ಯಾಚ್ ಮಾಡಿಕೊಳ್ಳಬಹುದು. ಪ್ಲಾಸ್ಟಿಕ್, ಫೈಬರ್, ಇಮಿಟೇಟಿಂಗ್ ಜ್ಯುವೆಲ್ಲರಿಗಳಲ್ಲೂ ಹತ್ತು ಹಲವು ವಿನ್ಯಾಸಗಳ ಚೋಕರ್‌ಗಳು ಲಭ್ಯವಿರುವುದರಿಂದ ಮಿಕ್ಸ್ ಅಂಡ್ ಮ್ಯಾಚ್ ಮಾಡಿಕೊಳ್ಳಲೂ ಚೋಕರ್‌ಗಳು ಸೂಕ್ತವಾದವು.

ಪುಟ್ಟ ಚಿನ್ನದ ನಾಣ್ಯಗಳ ಮೇಲೆ ಲಕ್ಷ್ಮಿಯ ವಿನ್ಯಾಸದ ಕುಸುರಿ ಕೆಲಸ ಮಾಡಿದವು ಇನ್ನೂ ಸೊಬಗನ್ನು ಹೆಚ್ಚಿಸುತ್ತವೆ. ಸಾಂಪ್ರದಾಯಿಕ ಉಡುಗೆ ಜೊತೆಗೆ ಕಾಸಿನ ನೆಕ್ಲೇಸ್ ಕ್ಲಾಸಿಕ್ ಲುಕ್ ಕೊಡುತ್ತದೆ. ಹಬ್ಬಹರಿದಿನಗಳಲ್ಲಿ, ಮದುವೆ ಸಮಾರಂಭಗಳಲ್ಲಿ ಕಾಸಿನ ನೆಕ್ಲೇಸ್ ವೈಭವ ವರ್ಣಿಸಲಸದಳ.

## ಅಂದದ ಕುಂದನ್ ನೆಕ್ಲೇಸ್

ಈಗೀಗ ಕುಂದನ್ ನೆಕ್ಲೇಸ್‌ಗೆ ಭಾರೀ ಬೇಡಿಕೆ. ಚಿನ್ನದ ಸರದ ಮೇಲೆ ಕುಂದನ್ ಹರಳುಗಳು ಅಂದ ಹೆಚ್ಚಿಸಲು ಸಹಕಾರಿ. ಇದು ದುಬಾರಿಯಾಗಿದ್ದು, ರಾಯಲ್ ಲುಕ್ ಕೊಡುತ್ತದೆ. ಶ್ರೀಮಂತರ ಸೊತ್ತಾಗಿರುವ ಕುಂದನ್ ನೆಕ್ಲೇಸ್ ಫ್ಯಾಷನಬಲ್ ಆಗಿಯೂ ಕಂಗೊಳಿಸುತ್ತದೆ. ಮದುವೆ ಸಮಾರಂಭದಲ್ಲಿ ಒಂದೇ ಒಂದು ಕುಂದನ್ ನೆಕ್ಲೇಸ್ ತೊಟ್ಟರೆ ಹೆಂಗಳೆಯರ ಕಣ್ಣುಗಳೆಲ್ಲ ಈ ಒಡವೆಯನ್ನೇ ಆವರಿಸುವುದು ಗ್ಯಾರಂಟಿ.

## ಫಿಲಿಗ್ರಿ ನೆಕ್ಲೇಸ್

ಫಿಲಿಗ್ರಿ ನೆಕ್ಲೇಸ್ ಮಹಿಳೆಯರ ಮೆಚ್ಚು. ನೆಕ್ಲೇಸ್ ವೈವಿಧ್ಯಕ್ಕೆ ಸೇರ್ಪಡೆಯಾಗಿರುವ ಫಿಲಿಗ್ರಿ ಚಿನ್ನ, ಬೆಳ್ಳಿ ಲೋಹದಿಂದ ಸೂಕ್ಷ್ಮವಾದ ಕುಸುರಿ ಕೆತ್ತನೆಯೊಂದಿಗೆ ತಯಾರಾಗುತ್ತದೆ. ಕಲಾತ್ಮಕತೆಗೆ ಇನ್ನೊಂದು ಹೆಸರೇ ಫಿಲಿಗ್ರಿ ಒಡವೆ. ಈಗೀಗ ಫಿಲಿಗ್ರಿ ಒಡವೆಗೆ ಹೆಚ್ಚಿನ ಬೇಡಿಕೆ ಇದೆ. ಕಸ್ಟಮೈಸ್ ಮಾಡಿದ ಫಿಲಿಗ್ರಿ ವಿನ್ಯಾಸದ ಒಡವೆ ಮದುವೆಯ ಹೆಣ್ಣಿಗೂ ಅತ್ಯಂತ ಸೂಕ್ತವಾದದ್ದು.



## ರೂಬಿ, ಕೆಂಪು ಹರಳಿನ ನೆಕ್ಲೇಸ್

ಕತ್ತಿನ ತುಂಬ ಹೊಳೆಹೊಳೆವ ರೂಬಿ ಮತ್ತು ಕೆಂಪು ಹರಳಿನ ನೆಕ್ಲೇಸ್ ಒಂದೇ ಒಡವೆ ಸಖತ್ ಲುಕ್ ಕೊಡುತ್ತದೆ. ಕಡು ಬಣ್ಣದ ರೇಷ್ಮೆ ಸೀರೆಯನ್ನು ಉಟ್ಟಾಗ ಈ ವೈವಿಧ್ಯದ ನೆಕ್ಲೇಸ್ ಕಣ್ಣಿಗೆ ತಂಪನ್ನೂ ನೀಡುತ್ತದೆ.

‘ರೂಬಿ ನೆಕ್ಲೇಸ್ ವಧುವಿಗೆ ಹೇಳಿ ಮಾಡಿಸಿದ ಒಡವೆ. ಇದು ಭವ್ಯವಾಗಿದ್ದು, ವರ್ಣರಂಜಿತ ನೋಟ ನೀಡುತ್ತದೆ. ಹೀಗಾಗಿ ಈಗೀಗ ಮದುವೆಯ ಸಂದರ್ಭದಲ್ಲಿ ಅನೇಕ ಕುಟುಂಬಗಳು ಕೆಂಪು ಹರಳಿನ ಮತ್ತು ರೂಬಿ ನೆಕ್ಲೇಸ್‌ಗೇ ಆದ್ಯತೆ ನೀಡುತ್ತಿವೆ’ ಎಂದು ಹೇಳುತ್ತಾರೆ ಬೆಂಗಳೂರಿನ ಚಿಕ್ಕಪೇಟೆಯಲ್ಲಿರುವ ಪವನ್ ಜ್ಯುವೆಲ್ಲರಿಯ ಮಾಲೀಕ ಮಾಣಿಕ್‌ಚಂದ್ ಪವನ್.

‘ಚಿನ್ನದ ಕುಸುರಿ ಕೆತ್ತನೆಯನ್ನೂ ಒಳಗೊಂಡು, ಮಧ್ಯೆ ಮಧ್ಯೆ ಕೆಂಪು ಹರಳಿನಿಂದ ಕೂಡಿ, ಅಂಚಿನಲ್ಲಿ ಮುತ್ತುಗಳನ್ನು ಪೋಣಿಸಿದರೆ ನೆಕ್ಲೇಸ್ ವಿನ್ಯಾಸ ಅತ್ಯಂತ ಆಕರ್ಷಕವಾಗಿ ಕಾಣುತ್ತದೆ. ಪುಟ್ಟದಾದ ಈ ಒಡವೆ ಹಗುರವಾಗಿಯೂ ಇರುತ್ತದೆ. ಹೆಚ್ಚು ಚಿನ್ನವನ್ನೂ ಅಪೇಕ್ಷಿಸುವುದಿಲ್ಲ. ಹರಳಿಗೆ ಮತ್ತು ರೂಬಿ ದುಬಾರಿಯಾಗಿರುವುದರಿಂದ ನೆಕ್ಲೇಸ್‌ಗೆ ಹೆಚ್ಚಿನ ಬೆಲೆ ತೆರಬೇಕಾಗುತ್ತದೆ’ ಎನ್ನುತ್ತಾರೆ ಪವನ್.

ಚಿನ್ನ, ವಜ್ರ ಮುಂತಾದ ದುಬಾರಿ ನೆಕ್ಲೇಸ್‌ಗಳನ್ನೂ ಮೀರಿಸುವ ವನ್ ಗ್ರಾಂ ಒಡವೆ ಈಗೀಗ ಮಧ್ಯಮ ವರ್ಗದವರನ್ನು ಸೆಳೆಯುತ್ತಿದೆ. ವಿವಿಧ ಶೇಡ್‌ಗಳಲ್ಲಿ ಸಿಗುವ, ಹರಳಿನಿಂದ ಮಾಡಿದ ನೆಕ್ಲೇಸ್‌ಗಳು ಮಿಕ್ಸ್ ಅಂಡ್ ಮ್ಯಾಚ್ ಮಾಡಿಕೊಳ್ಳಲೂ ಅನುಕೂಲವಾಗಿದೆ. ಒಟ್ಟಿನಲ್ಲಿ ಎವರ್‌ಗ್ರೀನ್ ರಾಣಿಯಂತೆ ಮಿಂಚುತ್ತಿರುವ ನೆಕ್ಲೇಸ್‌ಗಳು ಒಡವೆ ಲೋಕದಲ್ಲಿ ರಾರಾಜಿಸುತ್ತಿವೆ. ■